ದಿನಾಂಕಃ **18-09-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಂ.ಎಸ್.ರವರಿಂದ ಃ</u>

**1.** ನಾನು ಲೇವಾದೇವಿ ವ್ಯವಹಾರ ನಡೆಸುವುದಿಲ್ಲ. ಚೀಟಿ ವ್ಯವಹಾರ ಸಹ ನಡೆಸುವುದಿಲ್ಲ. ಪ್ರತಿವಾದಿಗಳು ತಮ್ಮ ಹಳೆ ಮನೆಯನ್ನು ರಿಪೇರಿ ಮಾಡಿಸಿಕೊಳ್ಳಬೇಕೆಂದು ಕೇಳಿದ ಕಾರಣ ರೂ.1 ಲಕ್ಷವನ್ನು ಶೇಕಡ ರೂ-1.5 ತಿಂಗಳ ಬಡ್ಡಿಯಂತೆ ಕೊಟ್ಟೆ ಈ ದಾವೆಯನ್ನು ಸಲ್ಲಿಸಿಕೊಂಡ ವಕೀಲರು ನಾನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಅಂಶಗಳನ್ನು ಗುರುತಿಸಿಕೊಂಡಿರುವ ವಕೀಲರು ನಾನೆ. ಪ್ರತಿವಾದಿಗಳಿಗೆ ನಾನು ಯಾವುದೇ ನೋಟೀಸ್ ಕೊಟ್ಟಿಲ್ಲ. ನೋಟೀಸ್ ಕೊಡಲು ತೊಂದರೆ ಇರಲಿಲ್ಲ. ದಿಃ01.05.2013 ರಂದು ಪ್ರತಿವಾದಿಗಳಿಗೆ ನೋಟೀಸನ್ನು ವಕೀಲರಾದ ಎ.ಎಲ್. ಶಶಿಕುಮಾರ್ ರವರ ಮೂಲಕ ಕೊಟ್ಟಿದ್ದೇನೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿಯು ಸದರಿ ದಾಖಲಾತಿಯನ್ನು ಓದಿ ರೂ. 80,000/-ವನ್ನು ಪ್ರತಿವಾದಿಗಳಿಗೆ ಕೊಟ್ಟಿದ್ದೆ ಆಗ ಹಣ ಮರುಪಾವತಿಸಿದ್ದರು ಎಂದು ನುಡಿಯುತ್ತಾರೆ. <u>ಸದರಿ ನೋಟೀಸನ್ನು ನಿಡಿ-**1** ಎಂದು ಗುರುತಿಸಲಾಯಿತು. ಅಂಚೆ ಕವರ್ ಅನ್ನು ನಿಡಿ-**2** ಎಂದು ಗುರುತಿಸಲಾಯಿತು</u>. ದಿಃ11.07.2013 ರಂದು ಸಂದೇಶ್ ರವರಿಗೆ ನೋಟೀಸನ್ನು ವಕೀಲರಾದ ಎ.ಎಲ್. ಶಶಿಕುಮಾರ್ ರವರ ಮೂಲಕ ಕೊಟ್ಟಿದ್ದೇನೆ ಎಂದರೆ ಸಾಕ್ಷಿಯು 5 ನೇ ತಿಂಗಳಲ್ಲಿ ಕೊಟ್ಟ ನೋಟೀಸ್ ನಂತರ ಜುಲೈ ತಿಂಗಳಲ್ಲಿ ಮತ್ತೆ ನೋಟೀಸನ್ನು ಕೊಟ್ಟಿರುತ್ತೇನೆ ಎಂದು ನುಡಿಯತ್ತಾರೆ. ಸಾಕ್ಷಿಯು 2 ನೋಟೀಸ್ ಗಳು ಒಂದೇ ವ್ಯವಹಾರಕ್ಕೆ ಸಂಬಂದಿಸಿದ್ದಾಗಿದೆ ಎಂದು ನುಡಿಯುತ್ತಾರೆ. <u>ಸದರಿ ನೋಟೀಸನ್ನು ನಿಡಿ-**3** ಎಂದು ಗುರುತಿಸಲಾಯಿತು. ಅಂಚೆ ಕವರ್ ಅನ್ನು ನಿಡಿ-**4** ಎಂದು ಗುರುತಿಸಲಾಯಿತು</u>. ದಿಃ13.10.2013 ರಂದು ಪ್ರತಿವಾದಿಗಳಿಗೆ ನೋಟೀಸನ್ನು ವಕೀಲರಾದ ಎನ್.ಬೆಟ್ಟೇಗೌಡ ರವರ ಮೂಲಕ ನಾನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದರಲ್ಲಿ ಸಿ.ಆರ್.ಜಯರಾಮೇಗೌಡ ಎಂದು ನಮೂದಿದೆ ಎಂದು ನುಡಿಯುತ್ತಾರೆ.

**2**. ದಿಃ11.04.2016 ರಂದು ಪ್ರತಿವಾದಿಗಳಿಗೆ ನೋಟೀಸನ್ನು ವಕೀಲರಾದ ಎಂ.ಬಿ. ನಾಗೇಶ್ ರವರ ಮೂಲಕ ಎಸ್.ಎನ್. ಸತೀಶ ಅಂದರೆ ನನ್ನ ಅಣ್ಣ ನೀಡಿದ್ದಾರೆ ಎಂದರೆ ಸಾಕ್ಷಿಯು

ಇರಬಹುದು ನನ್ನ ಅಣ್ಣನ ಹತ್ತಿರ ಸಹ ಅವರು ಸಾಲ ಪಡೆದಿದ್ದಾರೆ ಎಂದು ನುಡಿಯುತ್ತಾರೆ. ದಿಃ15.08.2013 ರಂದು ನನ್ನ ತಂದೆ ನಾಗೇಗೌಡರವರು ಹಣ ಸಂದಾಯ ರಶೀದಿಯನ್ನು ಪ್ರತಿವಾದಿಗಳಿಗೆ ಬರೆದು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಆ ಬಗ್ಗೆ ನಾನು ನನ್ನ ತಂದೆಯನ್ನು ವಿಚಾರಿಸಿದಾಗ ನನ್ನ ಹೆಬ್ಬೆಟ್ಟಿನ ಗುರುತನ್ನು ಪ್ರತಿವಾದಿಗಳು ತನಗೆ ಮದ್ಯ ಸೇವನೆ ಮಾಡಿಸಿ ಪಡೆದುಕೊಂಡಿದ್ದಾರೆಂದು ನನಗೆ ತಿಳಿಸಿದರು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನನಗೆ ಮತ್ತು ನನ್ನ ಅಣ್ಣ ಮತ್ತು ತಂದೆಯ ನಡುವೆ ಆಸ್ತಿ ವಿಚಾರಕ್ಕೆ ವೈಮನಸ್ಸು ಇತ್ತು, ಆ ಕಾರಣ ದ್ವೇಶದಿಂದ ನನ್ನ ತಂದೆ ನನ್ನ ವಿರುದ್ದ ಹೆಬ್ಬೆಟ್ಟಿನ ಗುರುತನ್ನು ಪ್ರತಿವಾದಿಗಳ ಪರವಾಗಿ ಹಾಕಿದ್ದಾರೆಂದು ನುಡಿಯುತ್ತಾರೆ. ಸದರಿ ಹಣ ಸಂದಾಯ ರಶೀದಿ ಪತ್ರದಲ್ಲಿ "ಪ್ರತಿವಾದಿಗಳೊಂದಿಗೆ ಚೀಟಿ ವ್ಯವಹಾರವನ್ನು ಮಾಡುತ್ತಿದ್ದು ರೂ.*1* ಲಕ್ಷಗಳ ಚೀಟಿ ಹಾಕಿದ್ದು ಅದರ ವ್ಯವಹಾರಿಕವಾಗಿ ಒಂದು ಖಾಲಿ *on demand pronote* ಮತ್ತು ಚಾಪ ಕಾಗದಕ್ಕೆ ಸಹಿ ಮಾಡಿ ಕೊಟ್ಟಿರುವುದು ಸರಿಯಷ್ಟೆ. ಈಗ ನಮ್ಮ ನಿಮ್ಮ ಚೀಟಿ ವ್ಯವಹಾರವು ಮುಕ್ತಾಯವಾಗಿರುತ್ತದೆ. ನಮ್ಮ ನಿಮ್ಮಲ್ಲಿ ಯಾವುದೇ ಹಣ ಕಾಸಿನ ವ್ಯವಹಾರವು ಇರುವುದಿಲ್ಲ. ಹಾಲಿ ನೀವು ನನಗೆ ಕೊಟ್ಟಿರುವ ದಾಖಲೆಗಳು ನಾನು ನನ್ನ ಬಾಬ್ತು ಮನೆಯನ್ನು ರಿಪೇರಿ ಮಾಡಿಸುವ ಸಮಯದಲ್ಲಿ ಕೈ ತಪ್ಪಿನಿಂದ ಕಳೆದು ಹೋಗಿ ಸದ್ಯದ ಪರಿಸ್ಥಿತಿಯಲ್ಲಿ ನನಗೆ ಸಿಕ್ಕಿರುವುದಿಲ್ಲ. ಮುಂದೆ ನಾನು ಸದರಿ ದಾಖಲೆಗಳು ಸಿಕ್ಕಿತ ತಕ್ಷಣ ನಿಮಗೆ ವಾಪಸ್ಸು ಮಾಡಲು ಒಪ್ಪಿರುತ್ತೇನೆ ಎಂದು ನಮೂದಿಸಿರುತ್ತಾರೆ" ಎಂದರೆ ಸದರಿ ಅಂಶಗಳು ಸುಳ್ಳಿನಿಂದ ಕೂಡಿರುದ್ದಾಗಿದೆ ಎಂದು ನುಡಿಯುತ್ತಾರೆ. ನನ್ನ ಮತ್ತು ನನ್ನ ತಂದೆಯ ನಡುವೆ ಪಿತ್ರಾರ್ಜಿತ ಸ್ವತ್ತಿನ ವಿಭಾಗಕ್ಕಾಗಿ ದಾವೆ ನಡೆಯುತ್ತಿತ್ತು.

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಪಾಂಡವಪುರ.**

**ಸಾಕ್ಷಿದಾರರ ಸಹಿ.**